


## ಪ್ರೇಮ, ಕಾಮದ ವೈಜ್ಞಾನಿಕ ವಿಶ್ಲೇಷಣೆ

ಡಾ.ಜೆ.ಬಾಲಕೃಷ್ಣ ಅವರ 'ಪ್ರೇಮ, ಕಾಮ ಮತ್ತು ವಿಜ್ಞಾನ' ಲೇಖನ ಚೆನ್ನಾಗಿದೆ. ಪ್ರೇಮ, ಕಾಮದ ವೈಜ್ಞಾನಿಕ ವಿಶ್ಲೇಷಣೆ ಅರ್ಥಗರ್ಭಿತವಾಗಿದೆ.

– ಸು.ವಿಜಯಲಕ್ಷ್ಮಿ, ಪಿ.ಗೋವಿಂದರಾಜ್, ಶಿವಮೊಗ್ಗ/ಎಸ್.ಪಿ.ದಾಕ್ಷಾಯಣಿ, ಶಿವಮೊಗ್ಗ

## ಕಾಮ ಮೊದಲೋ, ಪ್ರೇಮವೋ?

ಡಾ.ಜೆ. ಬಾಲಕೃಷ್ಣರ ಲೇಖನ ವಿಚಾರ ಪೂರ್ಣವಾಗಿದೆ. ಮೆದುಳಿನಲ್ಲಿ ತಯಾರಾಗುವ ಹಾರ್ಮೋನುಗಳ ವಿವರವಾಗಲೀ, ವರದಿಯಾಗುವ ಪ್ರಕರಣಗಳಾಗಲೀ– ಪ್ರೇಮ ಮತ್ತು ಕಾಮದ ವಿವರಗಳನ್ನು ಪೂರ್ತಿಯಾಗಿ ವಿವರಿಸಲಾರವು. ಇವನು/ಇವಳು ನನಗೆ ಸೂಕ್ತ ಎನ್ನುವ ಅನುಭವ ಮೊದಲು ಕಾಮದಿಂದಲೇ ಆರಂಭವಾಗಬಹುದೆನ್ನಿಸುತ್ತದೆ. ಮಹರ್ಷಿಯಾಗಿದ್ದ ವಿಶ್ವಾಮಿತ್ರನು ಮೇನಕೆಯಲ್ಲಿ ಲೀನನಾಗುವುದು, ಈಗಾಗಲೇ ಮದುವೆಯಾಗಿದ್ದ ದುಷ್ಯಂತನು ಶಕುಂತಲೆಯನ್ನು ಬಯಸುವುದು ಕಾಮದ ಸೂಚನೆಗಳು ಮಾತ್ರ. ಪ್ರೇಮ, ಕಾಮಗಳು ಕೊನೆಯಲ್ಲಿ ಸಂತಾನವನ್ನು ವೃದ್ಧಿಸುವುದಕ್ಕಾಗಿಯೇ ಎಂಬುದು ಮಾತ್ರ ಸತ್ಯವಾದುದು!

–ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

## ಪ್ರೇಮ ಸಂಕೀರ್ಣ!

ಪ್ರೇಮ (ಕಾಮ) ಕಲೆಯೂ ಹೌದು, ಶಾಸ್ತ್ರವೂ ಹೌದು. ಅದು ಕಡೆಯ ಮಾತು ಹೇಳಲಾಗದ ಸಂಕೀರ್ಣ, ವ್ಯಾಪಕ ವಿದ್ಯಮಾನ. (ಭಗವತ್ ಪ್ರೇಮ, ಅರ್ಥಾತ್ ಭಕ್ತಿಯೂ ಉಂಟಲ್ಲ!)

–ಸಿ.ಪಿ.ಕೆ., ಮೈಸೂರು

## ವ್ಯಂಗ್ಯಚಿತ್ರ ಅರ್ಥಪೂರ್ಣ

ಬೆಲೆ ಏರಿಕೆಯ ಬಿರುಗಾಳಿಯಲ್ಲಿ ಆಗಸದತ್ತ ಹಾರಿರುವ ಅನ್ನದ ತಟ್ಟೆ ಹಿಡಿಯಲಾಗದೇ ಬಸವಳಿದಿರುವ ಶ್ರೀಸಾಮಾನ್ಯನ ಪೇಚನ್ನು 'ಹಾರುವ ತಟ್ಟೆ' ನಾಲ್ಕಾರು ಗೆರೆಗಳ ವ್ಯಂಗ್ಯಚಿತ್ರ ಅದ್ಭುತವಾಗಿ ಅರ್ಥವತ್ತಾಗಿಸಿದೆ.

–ರಾಜೇಂದ್ರ ಕುಮಾರ್, ದೊಡ್ಡಬಳ್ಳಾಪುರ

## ಸಾನಿಯಾಗೆ ಕಿವಿಮಾತು

'ಶಾದಿ ಮುಬಾರಕ್ ಸಾನಿಯಾ, ಆದರೆ...' ಲೇಖನ ಸಾನಿಯಾಳಿಗೆ ಗಂಭೀರ ಎಚ್ಚರಿಕೆ ನೀಡಿದೆ. ಗಂಡನ ಮನೆಗೆ ಕಳಿಸುವ ಮುನ್ನ ತವರು ಮನೆಯವರು ಹೇಳುವ ಕಿವಿಮಾತಿನಂತಿತ್ತು. ಹನೀಫ್‌ರ ಬರವಣಿಗೆಯ ಶೈಲಿ ಮತ್ತು ನಿರೂಪಣೆ ಓದಿಸಿಕೊಂಡು ಹೋಗುತ್ತದೆ.

–ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ/ ರಾಜಶೇಖರಗೌಡ, ಕೊಟ್ಟೂರು/ ಡಿ.ಎಸ್.ಪಂಕಜ ಸುಬ್ರಮಣ್ಯಂ, ಬೆಂಗಳೂರು/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

## 'ಸುಧಾ' ಸಸ್ಯಾಹಾರಿ ಮಾತ್ರವಲ್ಲ

ಸುಧಾ ಸಸ್ಯಾಹಾರಿ ಎಂಬ ಎಚ್.ಎನ್. ವಿಶ್ವನಾಥ್ ಅಭಿಪ್ರಾಯ ಸರಿಯಲ್ಲ. 'ಸುಧಾ' ಪತ್ರಿಕೆ ಸರ್ವಧರ್ಮ ಸಹಿಷ್ಣು. ಜಾತಿ, ಮತ ವರ್ಣಾತೀತಳಾದ ಆಕೆ ತನ್ನೆಲ್ಲಾ ಪ್ರಜೆಗಳನ್ನು ಸಮಾನವಾಗಿ ಕಂಡು, ಅವರ ರುಚಿ–ಅಭಿರುಚಿಗೆ ಬೆಲೆ ಕೊಡುತ್ತಾಳೆ. ಸರ್ವತಂತ್ರ ಸ್ವತಂತ್ರಳಾದ ಆಕೆಯನ್ನು ಸಸ್ಯಾಹಾರಿಗಳು ಮಾತ್ರವೇ ಕಟ್ಟಿ ಹಾಕಲು ಖಂಡಿತಾ ಸಾಧ್ಯವಿಲ್ಲ.

–ಕೆ. ಕೃಷ್ಣಕುಮಾರಿ ಪ್ರಭಾಕರ್, ಬೆಂಗಳೂರು

## ಸಗಟು ಖರೀದಿಗಾಗಿ ಪುಸ್ತಕ!

ಪ್ರಕಾಶಕ ಓದುಗನಿಗೇ ಪುಸ್ತಕ ತಲುಪಿಸದಿದ್ದರೆ ಹೇಗೆ ಎಂದು ಗುಡಿಹಳ್ಳಿ ನಾಗರಾಜ ಅವರು ಪ್ರಮುಖ ವಿಷಯದತ್ತ ಗಮನ ಸೆಳೆದಿದ್ದಾರೆ. ಪುಸ್ತಕ ಪ್ರಾಧಿಕಾರ, ಸಾಹಿತ್ಯ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಂತಹ ಸರ್ಕಾರದ ಸಂಸ್ಥೆಗಳೂ ಸಹ ಜನರ ನಡುವೆ ಓದುವ ಅಭಿರುಚಿ ಹುಟ್ಟಿಸುವಲ್ಲಿ ವಿಫಲವಾಗಿವೆ.

–ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ/ ಚಂದ್ರಕಾಂತ ಕರದಳ್ಳಿ, ಶಹಾಪುರ/ ಎಂ.ಎನ್.ಬಿರಾದಾರ, ಧಾರವಾಡ/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ಕುಮಾರ ಸಂಪತ್ ಆಕಳವಾಡಿ, ಕೊಪ್ಪಳ

## ಗಳಗನಾಥ, ಚಿ.ಶ್ರೀ ನೆನಪು

'ಓದುಗನಿಗೆ ತಲುಪದ ಪುಸ್ತಕ' ಲೇಖನ ಸಾಮಯಿಕವಾಗಿದೆ. ಜಿ.ಪಿ. ರಾಜರತ್ನಂ ಅವರಿಗಿಂತ ಮುಂಚೆ ಗಳಗನಾಥರು ಓದುಗನಿಗೆ ಪುಸ್ತಕ ತಲುಪಿಸುವ ಕೆಲಸ ಮಾಡಿದ್ದಾರೆ. ಚಿ. ಶ್ರೀನಿವಾಸರಾಜು, ಆರ್.ಜಿ.ಹಳ್ಳಿ ನಾಗರಾಜರ ಹೆಸರೂ ಉಲ್ಲೇಖಾರ್ಹವಾದುದು.

–ಗುಬ್ಬಿ ರೇವಣಾರಾಧ್ಯ, ಬೆಂಗಳೂರು

## ಸಶಕ್ತ ಕಥೆ

ಸುಖವೆಂಬ 'ಭೃಂಗದ ಬೆನ್ನೇರಿ' ತಾನೇ ಒಂದು ಭೃಂಗವಾಗುವ ವರಲಕ್ಷ್ಮಿಯ ಪಾತ್ರ ಕತೆಯಲ್ಲಿ ತುಂಬಾ ಸಶಕ್ತವಾಗಿ ಬಂದಿದೆ.

–ಕೊಹಿಮ, ಬಸರಕೋಡು

## ಸ್ವಸ್ಥ ಜೀವನಕ್ಕೆ ದಿಕ್ಸೂಚಿ

'ಸ್ವಸ್ಥ ಜೀವನ'ಕ್ಕೆ ದುಡ್ಡೊಂದೇ ಪ್ರಧಾನವೆಂದು ತಿಳಿದಿರುವ ಇಂದಿನ ಜನತೆಗೆ ವಿಚಾರ ಲಹರಿಯ ವೈನತೇಯ ಲೇಖನ ನಿಜಕ್ಕೂ ದಿಕ್ಸೂಚಿಯಾಗಿದೆ.

–ಟಿ.ಎನ್. ಸರಸ್ವತಿ, ತಿಪಟೂರು/ ಎಚ್.ಎಂ. ಕಾಳಮ್ಮ, ಬಸರಕೋಡು/ ತರಂಗಿಣಿ, ತುಮಕೂರು

## ಮಿನಿ ಮಾಹಿತಿಯ ಸ್ವಾರಸ್ಯ

ಏಪ್ರಿಲ್ ತಿಂಗಳಲ್ಲಿ ಹೆಚ್ಚು ಸದ್ದು ಮಾಡಿರುವ ಇಬ್ಬರು ಸುದ್ದಿ ವೀರರಾದ ಸುನಂದಾ ಪುಷ್ಕರ್ ಹಾಗೂ ಲಲಿತ್ ಮೋದಿ ಅವರ ಕುರಿತು ಮಿನಿ ಮಾಹಿತಿ ಸ್ವಾರಸ್ಯವಾಗಿದೆ.

–ಎಂ.ಜೆ. ರಾಜಶೇಖರ್ ಶೆಟ್ಟಿ, ದೊಡ್ಡಬಳ್ಳಾಪುರ

## ಉತ್ತಮ ಮಕ್ಕಳ ಕಥೆ

'ಎಳೆಯರ ಅಂಗಳ'ದಲ್ಲಿ ಶಿವರಾಮ ಭಟ್ ಹತ್ತೊಕ್ಕಲು ಬರೆದ 'ವ್ಯಾಪಾರ ರಹಸ್ಯ' ಕತೆ ಉತ್ತಮವಾಗಿತ್ತು.

–ಪೂರ್ಣಿಮಾ ಭಟ್, ಹೊನ್ನಾವರ

## ತುಳು ಅಲ್ಲ ತಮಿಳುನಾಡು

'ಸುಧಾ' ಏಪ್ರಿಲ್ 22ರ ಸಂಚಿಕೆಯಲ್ಲಿ 'ಯೇರ್ಕಾಡು' ಕುರಿತ ಲೇಖನ. ಪುಟ 34, 'ತಮಿಳುನಾಡಿನ' ಎಂದಾಗಬೇಕಿತ್ತು, 'ತುಳುನಾಡಿನ' ಎಂದಾಗಿದೆ.

–ಆರ್.ಎಂ. ಗಿರ್ಜಿ, ಧಾರವಾಡ



ಲೇ... ನೀನು ಧಾರಾವಾಹಿ ಪಾತ್ರಗಳಿಗೆ ಬೈಯ್ತಿಯೋ.. ನನಗೆ ಬೈಯ್ತಿಯೋ ಸ್ವಲ್ಪ ಹೇಳಿ ಬೈಯೇ....




ಮೊದ್ಲೇ ಬಿಸಿಲಿನ ಉರಿ. ಇನ್ನು ನಿಮ್ಮ ಭಾಷಣದ ಕಾವಿಗೆ ಕುಡಿಯೋ ನೀರೂ ಆವಿಯಾದೀತು. ಹುಷಾರು ಕಣ್ರೀ...




ಡಾಂಬರು ಹಾಕುವ ದಿನವೇ ಉದ್ಘಾಟನೆ ಇಟ್ಕೊಳ್ಳೋಣ ಸಾರ್! ಆಮೇಲೆ ಅಲ್ಲಿ ರಸ್ತೆ ಹುಡುಕೋದೂ ಕಷ್ಟ...!